## ಇಲ್ಲಿಯವರೆಗೆ



ಗಿರಿಧರ ಎನ್ನುವ ವ್ಯಕ್ತಿ ಸುನಿಲನ ಮನೆಗೆ ಬಂದು ಸುನಿಲ್‌ನನ್ನು ಕಾಣಬೇಕೆಂದು ಹೇಳುತ್ತಾನೆ. ಪತಿ ಇಲ್ಲದ ವೇಳೆ ಬಂದ ಆಗಂತುಕನನ್ನು ಕಂಡು ಶರಧಿಗೆ ದಿಗಿಲಾಗುತ್ತದೆ. ಇದು ಹೇಮಾವತಿಯ ಕೆಲಸವೇ ಎಂದು ಸುನಿಲ್ ಅರ್ಥೈಸಿಕೊಳ್ಳುತ್ತಾನೆ. ಜತೆಗೆ ಆಕೆಗೆ ಬುದ್ಧಿ ಹೇಳಬೇಕು ಎಂದೂ ಯೋಚಿಸುತ್ತಾನೆ. ಕಾರ್ಖಾನೆಗೆ ಅರ್ಧ ದಿನ ರಜೆ ಹಾಕಿ ಏಂಜೆಲ್ ಗಾರ್ಮೆಂಟ್ಸ್ ಹತ್ತಿರ ಹೋಗಿ ರಿಸೆಪ್ಶನ್‌ನಲ್ಲಿ ಹೇಮಾವತಿ ಬಗ್ಗೆ ಕೇಳಿದ. ಹೇಮಾವತಿ ಕೆಲಸ ಬಿಟ್ಟು ಬಹಳ ದಿನವಾಯಿತು ಎಂಬ ಸುದ್ದಿ ತಿಳಿಯಿತು. ಅಲ್ಲಿಂದ ಆಕೆಯ ಮನೆ ವಿಳಾಸ ಪಡೆದು ಹೇಮಾವತಿ ಮನೆಗೆ ಹೋಗುತ್ತಾನೆ. ದೊಡ್ಡ ಬಂಗಲೆ ಮುಂದೆ ನಿಂತಾಗ ಹೇಮಾವತಿ ಪುಟ್ಟ ಮಗುವಿನೊಂದಿಗೆ ಹೊರಗೆ ಬರುತ್ತಾಳೆ. ಅವಳನ್ನು ನೋಡಿ ಸುನಿಲನಿಗೆ ಆಶ್ಚರ್ಯವಾಗುತ್ತದೆ. ಅಲ್ಲಿಂದ ಗಿರಿಧರನೆಂಬ ಆಗಂತುಕನ ಬಗ್ಗೆ ಚಿಂತೆ ಕಾಡುತ್ತದೆ. ಆಗ ಸುನಿಲನ ಗೆಳೆಯ ಸುಬ್ರಹ್ಮಣ್ಯನ ಫೋನ್ ಬರುತ್ತದೆ. ಆತ ಹೇಮಾವತಿಯ ವಿವರ ನೀಡುತ್ತಾನೆ.

ಗೇಟಿನ ಹತ್ತಿರ ಹೋಗಿ ಅವರ ಎದುರು ನಿಂತೆ. ಅದು ಅವರೇ..! ನೀಟಾಗಿ ಶೇವು ಮಾಡಿದ ಅದೇ ಒರಟು ಮುಖ..! ಅದೇ ಎತ್ತರದ ನೀಳಕಾಯ..! ಸಂಶಯವೇ ಇಲ್ಲಾ.. ಅವರು ಅದೇ ಸುನಿಲ್..! ನನ್ನ ಕಣ್ಣುಗಳನ್ನು ನಂಬಲು ನನಗೇ ಸಾಧ್ಯವಾಗಲಿಲ್ಲ..!

ನೋಡುತಿದ್ದಂತೆಯೇ ನನ್ನ ಎದೆಯಲ್ಲಿ ಸಂಭ್ರಮವೋ ಸಂಭ್ರಮ.. ಆದರೆ ಅದು ಕೆಲವೇ ಕ್ಷಣಗಳು ಮಾತ್ರ..! ತಕ್ಷಣವೇ ನನ್ನ ಮನಸ್ಸು ಕನಸಿನಿಂದ ವಾಸ್ತವಕ್ಕಿಳಿಯಿತು. ನಾನೀಗ ಗೃಹಿಣಿ. ಈಗ ಅವರು ನನ್ನ ಪ್ರೇಮಿಯಲ್ಲ. ನನ್ನ ಕಣ್ಣಿಗೆ ಕಾಣಿಸುವ ಎಲ್ಲಾ ಗಂಡಸರಂತೆಯೇ ಅವರೂ ಒಬ್ಬ ಪರಪುರುಷ. ಅವರ ರೂಪವನ್ನು ಕಣ್ಣುಗಳಲ್ಲಿ ತುಂಬಿಕೊಳ್ಳುವುದೂ ಮಹಾಪಾಪ! ಹಾಗೆಂದುಕೊಂಡ ಕ್ಷಣದಿಂದಲೇ ನನ್ನ ಹೃದಯ ವೇಗವಾಗಿ ಬಡಿದುಕೊಳ್ಳತೊಡಗಿತು. ನನ್ನ ಮನಸ್ಸಿನಲ್ಲಿ ಇನ್ನಿಲ್ಲದ ಕಳವಳ, ಆತಂಕಗಳು ಮೂಡಿ ತೀವ್ರ ಗಾಬರಿಯಾಯಿತು. ಅವರೊಡನೆ ಸೌಜನ್ಯದಿಂದ ನಾಲ್ಕು ಮಾತನಾಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ಯಾಕೆಂದರೆ ಅದು ದಿನವೂ ನನ್ನ ಗಂಡ ಮಧ್ಯಾಹ್ನದ ಊಟಕ್ಕೆ ಬರುವ ಸಮಯ. ಬೇಕಂತಲೇ ಅವರನ್ನು ನೀವು ಯಾರೆಂದು ನಡುಗುತ್ತಿದ್ದ ಧ್ವನಿಯಲ್ಲಿ ಪ್ರಶ್ನಿಸಿದೆ. ಅವರು ಅದೇ ಗಡುಸು ಧ್ವನಿಯಲ್ಲಿ ಮೆಲ್ಲಗೆ ಉತ್ತರಿಸಿದರು. ಅವರು ಏನು ಹೇಳಿದರೆಂದು ನನಗೆ ತಿಳಿಯಲಿಲ್ಲ. ನನ್ನ ಮನಸ್ಸಿನಲ್ಲಿ ನನ್ನ ಗಂಡ, ಅವರು ಅಲ್ಲಿ ನಿಂತಿದ್ದಂತೆಯೇ ಮನೆಗೆ ಬಂದು ಯಾರೀತ ಎಂದು ಪ್ರಶ್ನಿಸಿದರೆ ಏನೆಂದು ಹೇಳುವುದು ಎಂದು ಅತೀವ ಹೆದರಿಕೆಯಾಗುತಿತ್ತು. ಮೊದಲೇ ನನ್ನ ಗಂಡ ಮುಂಗೋಪಿ. ಅದೇ ಹೆದರಿಕೆಯಲ್ಲಿ ನಾನು ಅವರ ಬಳಿ ನಿಜವನ್ನೇ ನುಡಿದು 'ಮತ್ತೊಮ್ಮೆ ಎಂದೂ ಬರಬೇಡಿ' ಎಂದು ಬೇಡಿಕೊಂಡೆ. ಅವರು ಸಂತಸದಿಂದಲೇ 'ದೇವರು ನಿನಗೆ ಒಳ್ಳೆಯದು ಮಾಡಲಿ, ಇನ್ನೆಂದೂ ಬರುವುದಿಲ್ಲ' ಎಂದು ಹೇಳಿ ನನ್ನ ಅಪ್ಪುಗೆಯಲ್ಲಿದ್ದ ಪಾಪೂವನ್ನೇ ಒಂದೂ ಕ್ಷಣ ದಿಟ್ಟಿಸಿದರು. ಯಾಕೆಂದು ತಿಳಿಯಲಿಲ್ಲ. ಎಲ್ಲವೂ ಸರಿಯಾಗಿದ್ದಿದ್ದರೆ ಇದು ಅವರ ಮಗುವೇ ಆಗುತಿತ್ತೇನೋ ಎಂಬ ಆಲೋಚನೆ ಬಂದ ತಕ್ಷಣವೇ ನಾನು ತಲ್ಲಣಿಸಿಹೋದೆ. ಅಂತಹ ಯೋಚನೆಯನ್ನು ಮಾಡುವುದೂ ಮಹಾಪರಾಧ ಎನಿಸಿ ನನ್ನನ್ನೇ ನಾನು ಶಪಿಸಿಕೊಂಡೆ. ಅವರು ಮತ್ತೆ ಮರುಮಾತನಾಡದೇ ಒಮ್ಮೆಯೂ ಹಿಂತಿರುಗಿ ನೋಡದೇ ಹೊರಟು ಹೋದರು. ನಾನು ಅವರು ಹೋದ ದಾರಿಯನ್ನೇ ನೋಡುತ್ತಾ ತುಸುಹೊತ್ತು ಗೇಟಿನ ಬಳಿಯೇ ನಿಂತಿದ್ದೆ. ಅವರು ಮತ್ತೆ ಕೆಲವೇ ಕ್ಷಣಗಳ ಕಾಲ ನನ್ನ ಜೀವನದಲ್ಲಿ ಬಂದು ಹೋದರು!

ಅವರೇನೋ ಬಂದು ಸದ್ದಿಲ್ಲದಂತೆ ಹೋದರು. ಎಂತಹುದೋ ಹೆದರಿಕೆಯಿಂದ ಕಂಗಾಲಾಗಿ ಭೋರ್ಗರೆಯುತಿದ್ದ ನನ್ನ ಮನಸ್ಸೂ ಕೂಡ ಶಾಂತವಾಯಿತು. ಆದರೆ ಅವರು ನನ್ನನ್ನು ನೋಡಲೆಂದೇ ಬಂದಿದ್ದರೇ..? ಏನನ್ನಾದರೂ ತಿಳಿಸಲು ಬಂದಿದ್ದರೇ..? ನಾನು ಮದುವೆಯಾಗಿ ಒಂದು ಮಗುವಿನ ತಾಯಿಯಾಗಿರುವುದು ಅವರಿಗೆ ತಿಳಿದಿರಲಿಲ್ಲವೇ..? ಅಷ್ಟಕ್ಕೂ ನನ್ನ ವಿಳಾಸವು ಅವರಿಗೆ ತಿಳಿದಿದ್ದಾದರೂ ಹೇಗೆ..? ಎಂಬಂತಹ ನೂರಾರು ಆಲೋಚನೆಗಳು ನನ್ನ ಮನಸ್ಸಿನಲ್ಲಿ ಅಲೆಅಲೆಯಾಗಿ ನುಗ್ಗಿಬರತೊಡಗಿದವು. ತಕ್ಷಣವೇ ಯಾತಕ್ಕಾಗಿಯಾದರೂ ಬಂದಿರಲಿ.. ಈಗ ಅವರೊಬ್ಬ ಪರಪುರುಷ. ಈಗ ನಮ್ಮಿಬ್ಬರ ನಡುವೆ ಉಳಿದಿರುವುದು ಅದೊಂದು ಸಂಬಂಧ ಮಾತ್ರ.. ಎಂದು ನನ್ನನ್ನೇ ನಾನು ಸಂತೈಸಿಕೊಂಡು, ಅವರು ಇಲ್ಲಿಗೆ ಬಂದಿರಲೇ ಇಲ್ಲವೆಂದು ಭಾವಿಸಿ ಪಾಪೂವನ್ನು ಇನ್ನಷ್ಟು ಬಿಗಿಯಾಗಿ ತಬ್ಬಿಹಿಡಿದು ಮನೆಯ ಬಾಗಿಲಿನ ಕಡೆ ನಡೆದೆ. ಅವರು ಬಂದು ಹೋದದ್ದನ್ನು ಮರೆಯಲು ಪ್ರಯತ್ನಿಸಿದಂತೆಲ್ಲಾ ಅವರೊಂದಿಗೆ ಕಳೆದ ಮಧುರ ನೆನಪುಗಳು ನನ್ನನ್ನು ನನ್ನ ನೆರಳಿನಂತೆ ಬಿಡದೇ ಹಿಂಬಾಲಿಸತೊಡಗಿದವು. ಅದೇ ಗುಂಗಿನಲ್ಲಿ ನಾನು ಸಾಧ್ಯವಾದಷ್ಟೂ ನಿಧಾನವಾಗಿ ನಡೆಯುತ್ತಿದ್ದೆ.

ಬಾಗಿಲಿನಲ್ಲಿ ಕಸಬರಿಕೆ ಹಿಡಿದು ನನ್ನನ್ನೇ ನೋಡುತ್ತಿದ್ದ ನಿಂಗಮ್ಮನನ್ನು ಕಂಡು ಅವಳೇನಾದರೂ ನಮ್ಮಿಬ್ಬರ ಸಂಭಾಷಣೆಗಳನ್ನು ಕೇಳಿಸಿಕೊಂಡಳೋ ಎನ್ನುವ ಆತಂಕದಿಂದ ತುಸು ಭಯವಾಯಿತು. ಅದನ್ನು ತೋರ್ಪಡಿಸಿಕೊಳ್ಳಲಿಲ್ಲ. ಅವಳ ಮುಖವನ್ನು ನೇರವಾಗಿ ನೋಡಲು ಧೈರ್ಯವಾಗದೇ ದೃಷ್ಟಿಯನ್ನು ಮನೆಯ ಬಾಗಿಲಿನತ್ತ ಹರಿಸಿ ಹೊಸ್ತಿಲು ದಾಟಿ ಮನೆಯ ಒಳಗೆ ನಡೆದೆ. ಹಿಂದೆಯೇ ಬಂದವಳು 'ಯಾರು ಅಮ್ಮಾರೇ ಅವರು..' ಎಂದು ಕುತೂಹಲದಿಂದ ಪ್ರಶ್ನಿಸಿದ್ದು ಕಂಡು ಎದೆ ಜಲ್ಲೆಂದಿತು. ಆದರೆ ತುಸುವೂ ವಿಚಲಿತಳಾಗದೆ 'ಯಾರೋ ಬ್ಯಾಂಕಿನವರಂತೆ ನಿಂಗಮ್ಮಾ.. ನನ್ನದು ಇಲ್ಲಿನ ಸ್ಟೇಟ್ ಬ್ಯಾಂಕಿನಲ್ಲಿ ಅಕೌಂಟಿದೆ ನೋಡು.. ಅಲ್ಲಿ ಕೆಲಸ ಮಾಡುತ್ತಾರಂತೆ.. ನನ್ನ ಅಕೌಂಟಿನಲ್ಲಿರುವ ಹೆಸರು, ಅಡ್ರೆಸ್ಸು ಹುಡುಕಿಕೊಂಡು ಬಂದು ಸ್ವಲ್ಪ ಫಿಕ್ಸೆಡ್ ಡಿಪಾಸಿಟ್ ಇಡಿ ಎಂದು ಕೇಳಲು ಬಂದಿದ್ದರು..' ಎಂದು ಸುಳ್ಳಿನ ಸರಮಾಲೆಯೊಂದನ್ನು ಸೃಷ್ಟಿಸಿದೆ. ನನ್ನ ಉತ್ತರದಿಂದ ಅವಳು ಅಷ್ಟೇನಾ.. ಎನ್ನುವಂತೆ ಮುಖ ಮಾಡಿದ್ದನ್ನು ಗಮನಿಸಿ ಅವಳ ಕುತೂಹಲ ಕರಗಿತು ಎಂಬುದು ನನಗೆ ಖಾತ್ರಿಯಾಯಿತು.

ಪಾಪೂವನ್ನು ಎದೆಗವಚಿಕೊಂಡು ನಮ್ಮ ವಿಶಾಲವಾದ ಮಲಗುವ ಕೋಣೆಗೆ ಹೋದೆ. ಏನು ಮಾಡುವುದೆಂದು ತಿಳಿಯದೇ ಒಂದು ಕ್ಷಣ ಸುಮ್ಮನೆ ನಿಂತುಕೊಂಡೆ. ಅವರ ನೆನಪಿನಿಂದ ನನ್ನ ಮನಸ್ಸು ಮುಕ್ತವಾಗಿರಲಿಲ್ಲ. ಹಾಸಿಗೆಯಲ್ಲಿ ಮಲಗಿ ಹಾಲಿನಿಂದ ತುಂಬಿದ್ದ ಎದೆಯನ್ನು ಪಾಪೂವಿನ ಬಾಯಿಗಿಟ್ಟು ಕಣ್ಣುಮುಚ್ಚಿದೆ. ಕ್ಷಣಮಾತ್ರದಲ್ಲಿ ನನ್ನ ಮನಸ್ಸು ನಾಲ್ಕು ವರ್ಷಗಳ ಹಿಂದಕ್ಕೆ ತೆರಳಿ ನಡೆದು ಹೋದ ಘಟನೆಗಳನ್ನು ಮೆಲುಕು ಹಾಕತೊಡಗಿತು.

* * * * *

ನಾನು ಪ್ರತಿ ಸೋಮವಾರವೂ ಬೆಳಗಿನ ನಾಲ್ಕೂವರೆ ಗಂಟೆಗೆಲ್ಲಾ ಎದ್ದು ಸಿದ್ಧಳಾಗಿ ಅಮ್ಮ ಮಾಡಿಟ್ಟಿರುತ್ತಿದ್ದ ಕಾಫಿ ಕುಡಿದು ಐದೂಕಾಲು ಗಂಟೆಗೆ ನಮ್ಮೂರಿನಿಂದ ಹೊರಡುತ್ತಿದ್ದ ಮಹದೇಶ್ವರ ಬಸ್ಸಿನಲ್ಲಿ ಬಂದು ಆರು ಗಂಟೆಯ ಒಳಗಾಗಿ ಮದ್ದೂರಿನಲ್ಲಿ ಇಳಿಯುತ್ತಿದ್ದೆ. ಆನಂತರ ಮೈಸೂರಿನ ಕಡೆಯಿಂದ ಬರುತ್ತಿದ್ದ ಯಾವುದಾದರೂ ಎಕ್ಸಪ್ರೆಸ್ ಬಸ್ಸು ಹತ್ತಿ ಬೆಂಗಳೂರಿಗೆ ಬರುತ್ತಿದ್ದೆ. ಕೆಂಗೇರಿಯಲ್ಲಿ ಇಳಿದು ವಾಪಾಸು ನಡೆದುಕೊಂಡು ಹೋಗಿ ಎಂಟು ಗಂಟೆಗೆಲ್ಲಾ ನಮ್ಮ ಗಾರ್ಮೆಂಟ್ಸ್ ಫ್ಯಾಕ್ಟರಿಯನ್ನು ತಲುಪುತ್ತಿದ್ದೆ. ಅಂದೂ ಕೂಡ ನಾನು ಮದ್ದೂರಿನಲ್ಲಿ ಬಸ್ಸಿಳಿದು ಹೆದ್ದಾರಿಗೆ ಬಂದು ನಿಂತ ತಕ್ಷಣವೇ ಮೈಸೂರು–ತಿರುಪತಿ ಎಂಬ ಬೋರ್ಡ್‌ನ ಎಕ್ಸ್‌ಪ್ರೆಸ್ ಬಸ್ಸು ಎದುರಿಗೆ ನಿಂತಿತು. ನಾನು ಆತುರಾತುರವಾಗಿ ಬಸ್ಸು ಹತ್ತಿದೆ. ಬಸ್ಸು ಹೊರಟಿತು. ಬಸ್ಸಿನಲ್ಲಿ ತುಂಬಾ ಪ್ರಯಾಣಿಕರೇನೂ ಇರಲಿಲ್ಲ. ನಾನು ಹಿಂದೆ ನಿಂತು ನೋಡಿದೆ. ಬಲಕ್ಕಿದ್ದ ಮೂರು ಸೀಟಿನ ಆಸನಗಳಲ್ಲಿ ಇಬ್ಬರಿಬ್ಬರು ಗಂಡಸರು